# ದೂರುದಾರರಿಗೆ ಪೊಲೀಸ್ ಕಮಿಷನರ್ ಕಚೇರಿಯಿಂದ ಕರೆ!

## ಠಾಣೆಗಳ ಸ್ಪಂದನೆ ತಿಳಿಯಲು ಹೊಸ ಹೆಜ್ಜೆ

■ ಸಂತೋಷ್ ಬೊಳ್ಳೆಟ್ಟು

ಮಂಗಳೂರು, ಆ. 7: 'ಹಲೋ... ನೀವು ಪೊಲೀಸ್ ಠಾಣೆಗೆ ಹೋಗಿದ್ದೀರಾ... ನಿಮ್ಮ ದೂರಿಗೆ ಪೊಲೀಸರು ಹೇಗೆ ಸ್ಪಂದಿಸಿದರು... ಏನಾದರೂ ತೊಂದರೆ ಆಯಿತೆ... ತುಂಬಾ ಹೊತ್ತು ಕಾಯಿಸಿದರಾ... ನಮ್ಮಿಂದ ಏನಾದರೂ ಸಹಾಯ ಬೇಕೆ...?

ಸಾರ್ವಜನಿಕರು ಯಾವುದೇ ಠಾಣೆಗೆ ತೆರಳಿ ದೂರು ನೀಡಿದ ಸ್ವಲ್ಪ ಸಮಯದಲ್ಲೇ ಅವರಿಗೆ ನಗರ ಪೊಲೀಸ್ ಆಯುಕ್ತರ ಕಚೇರಿಯಿಂದ ಇಂತಹ ವಿಚಾರಣೆಯ ಕರೆ ಬರುತ್ತದೆ. ಇದು ಆಯುಕ್ತರು ತಮ್ಮ ಇಲಾಖೆಯನ್ನು ಚುರುಕುಗೊಳಿಸಲು ರೂಪಿಸಿರುವ ವಿನೂತನ ವ್ಯವಸ್ಥೆ.

**ಲೋಪಗಳ ಮಾಹಿತಿ**

ಠಾಣೆಯಲ್ಲಿ ಸೂಕ್ತ ಸ್ಪಂದನೆ ದೊರೆಯದೇ ಇದ್ದಲ್ಲಿ ಜನರು ಆ ಮಾಹಿತಿಯನ್ನು ಕರೆ ಮಾಡಿದ ಅಧಿಕಾರಿಗೆ ತಿಳಿಸುತ್ತಾರೆ. ಕೆಲಸ ಕಾರ್ಯ ವಿಳಂಬವಾಗಿದ್ದಲ್ಲಿ ಆ ಬಗ್ಗೆಯೂ ತಿಳಿಸುತ್ತಾರೆ. ಈ ವಿಚಾರವನ್ನು ತತ್‌ಕ್ಷಣ ಸಂಬಂಧಿತ ಠಾಣೆಗೆ ರವಾನಿಸಿ ಕೈಗೊಂಡ ಕ್ರಮದ ಬಗ್ಗೆ ವರದಿ ನೀಡುವಂತೆ ಸೂಚಿಸಲಾಗುತ್ತದೆ ಎಂದು ಕಮಿಷನರ್ ಕಚೇರಿಯ ಅಧಿಕಾರಿಗಳು ತಿಳಿಸಿದ್ದಾರೆ.


**ಕ್ಯು ಆರ್ ಕೋಡ್ ಜತೆ ಫೋನ್ ಕರೆ**

ಈಗಾಗಲೇ ಪೊಲೀಸ್ ಠಾಣೆ ಹಾಗೂ ಪೊಲೀಸ್ ಇಲಾಖೆಯ ಇತರಕಚೇರಿಗಳಲ್ಲಿಕ್ಯುಆರ್ ಕೋಡ್ ಅಳವಡಿಸಲಾಗಿದ್ದು ಅದನ್ನುಸ್ಕ್ಯಾನ್ ಮಾಡುವ ಮೂಲಕ ಸಾರ್ವಜನಿಕರು ತಮಗೆ ಕಚೇರಿಯಲ್ಲಿ ದೊರೆತ ಸ್ಪಂದನೆಯ ಕುರಿತು ಡಿಸಿಪಿ, ಕಮಿಷನರ್ ಅವರಿಗೆ ಮಾಹಿತಿ ನೀಡಬಹುದಾಗಿದೆ. ಇದೀಗ ಆಯುಕ್ತರ ಕಚೇರಿಯ ಅಧಿಕಾರಿಗಳು ಇನ್ನೂ ಒಂದು ಹೆಜ್ಜೆ ಮುಂದೆ ಇಟ್ಟು ನೇರವಾಗಿ ದೂರುದಾರರಿಗೇ ಕರೆ ಮಾಡಿ ವಿಚಾರಿಸಲಾರಂಭಿಸಿದ್ದಾರೆ.

**ದೂರುದಾರರಿಗೆ ಆಶ್ಚರ್ಯ**

ಠಾಣೆಗೆ ತೆರಳಿ ವಾಪಸ್ ಬರುವಷ್ಟರಲ್ಲಿ ಅಥವಾ ಮರುದಿನ ಪೊಲೀಸ್ ಕಚೇರಿಯಿಂದಲೇ ಬರುವ ಕರೆ ದೂರುದಾರರಲ್ಲಿ ಆಶ್ಚರ್ಯ ಮೂಡಿಸಿದೆ. 'ನಾನು ಠಾಣೆಗೆ ಹೋಗಿ ಬಂದ ಅನಂತರ ಆಯುಕ್ತರ ಕಚೇರಿಯಿಂದ ಕರೆ ಬಂತು. ಒಮ್ಮೆ ಆಶ್ಚರ್ಯವಾಯಿತು. ಅನಂತರ ಖುಷಿಯಾಯಿತು.

ಇದೊಂದು ಉತ್ತಮ ವ್ಯವಸ್ಥೆ. ಇದನ್ನು ದ.ಕ. ಜಿಲ್ಲೆ ಮಾತ್ರವಲ್ಲದೆ ಇಡೀ ರಾಜ್ಯಕ್ಕೆ ವಿಸ್ತರಿಸಬೇಕು' ಎನ್ನುತ್ತಾರೆ ಮಂಗಳೂರಿನ ನಿವಾಸಿ ಗಿರೀಶ್.




**ದಿನಕ್ಕೆ ಕನಿಷ್ಠ 60 ಮಂದಿಗೆ ಕರೆ**

ಮಂಗಳೂರು ಪೊಲೀಸ್ ಕಮಿಷನರೆಟ್ ವ್ಯಾಪ್ತಿಯಲ್ಲಿ 20 ಠಾಣೆಗಳಿದ್ದು ದಿನಕ್ಕೆ ಸರಾಸರಿ 100-158 ಮಂದಿ ಭೇಟಿ ನೀಡುತ್ತಾರೆ. ಈ ಪೈಕಿ ಕಮಿಷನರ್ ಕಚೇರಿಯಿಂದ ರ‍್ಯಾಂಡಮ್ ಆಗಿ ಕೆಲವರಿಗೆ (ಕನಿಷ್ಠ ಮೂವರಿಗೆ) ಕರೆ ಮಾಡಿ ವಿಚಾರಿಸಲಾಗುತ್ತದೆ. ಮಂಗಳೂರಿನಲ್ಲಿ ಎಪ್ರಿಲ್‌ನಲ್ಲಿ ಆರಂಭಿಸಲಾದ ಕ್ಯುಆರ್ ಕೋಡ್ ಫೀಡ್‌ಬ್ಯಾಕ್ ವ್ಯವಸ್ಥೆಯನ್ನು ಇದೀಗ 'ಲೋಕ ಸ್ಪಂದನ' ಹೆಸರಿನಲ್ಲಿ ಬೆಂಗಳೂರು ನಗರ ಸೇರಿದಂತೆ ರಾಜ್ಯದ ವಿವಿಧೆಡೆ ಅನುಷ್ಠಾನಗೊಳಿಸಲಾಗುತ್ತಿದೆ. ಮಂಗಳೂರು ಕಮಿಷನರೆಟ್ ವ್ಯಾಪ್ತಿಯಲ್ಲಿ ಕ್ಯುಆರ್ ಕೋಡ್ ಮೂಲಕ ದಿನಕ್ಕೆ ಸರಾಸರಿ 30 ಮಂದಿ ಪ್ರತಿಕ್ರಿಯೆ ಕಳುಹಿಸುತ್ತಿದ್ದಾರೆ.

> ಈಗಾಗಲೇ ಪೊಲೀಸ್ ಕಮಿಷನರೆಟ್ ವ್ಯಾಪ್ತಿಯಲ್ಲಿ ಕ್ಯುಆರ್ ಕೋಡ್ ಮೂಲಕ ಸಾರ್ವಜನಿಕರಿಂದ ಫೀಡ್‌ಬ್ಯಾಕ್ ಪಡೆದುಕೊಳ್ಳಲಾಗುತ್ತಿದೆ. ಇದನ್ನು ಬಳಸದೆ ಇರುವವರಿಂದಲೂ ಮಾಹಿತಿ ಸಂಗ್ರಹಕ್ಕಾಗಿ ಕರೆ ಮಾಡುತ್ತಿದ್ದೇವೆ. ಇದಲ್ಲದೆ ಆಯುಕ್ತರ ಕಚೇರಿಯಿಂದ ಸಿಬಂದಿಯನ್ನು ಸಾರ್ವಜನಿಕರಂತೆ (ಡಿಕಾಯ್) ಠಾಣೆಗೆ ಕಳುಹಿಸಿ ನಿಗಾ ಇಡಲಾಗುತ್ತಿದೆ. ಹೀಗೆ ಎರಡು ಹಂತಗಳಲ್ಲಿ ಪ್ರತಿಕ್ರಿಯೆ ಪಡೆಯಲಾಗುತ್ತಿದೆ. ಸಾರ್ವಜನಿಕರಿಗೆ ಪೊಲೀಸರಿಂದ ಉತ್ತಮ ಸ್ಪಂದನೆ ಸಿಗಬೇಕು. ವಿಳಂಬವಾಗಬಾರದು. ವ್ಯವಸ್ಥೆ ಮೇಲಿನ ನಂಬಿಕೆ ಹೆಚ್ಚಾಗಬೇಕು ಎಂಬುದೇ ನಮ್ಮ ಉದ್ದೇಶ.
>
> – ಕುಲದೀಪ್ ಕುಮಾರ್ ಆರ್. ಜೈನ್, ಪೊಲೀಸ್ ಆಯುಕ್ತರು, ಮಂಗಳೂರು

# ‘ಪೋಷಣ’ ಅನುಷ್ಠಾನ ಸಿಬಂದಿಗಿಲ್ಲ ಪೋಷಣೆ!

## 5 ತಿಂಗಳುಗಳಿಂದ ವೇತನವಿಲ್ಲದೆ ಪರದಾಟ | ಅನುದಾನವಿಲ್ಲದೆ ಸಂಬಳವೇ ಸ್ಥಗಿತ

■ ಕಿರಣ್ ಸರಪಾಡಿ

ಬಂಟ್ವಾಳ, ಆ. 7: ಮಕ್ಕಳು-ಮಹಿಳೆಯರ ಅಪೌಷ್ಟಿಕತೆಯನ್ನು ದೂರ ಮಾಡುವ ಉದ್ದೇಶದ 'ಪೋಷಣ ಅಭಿಯಾನ'ವನ್ನು ಅನುಷ್ಠಾನ ಮಾಡುತ್ತಿರುವ ರಾಜ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಸಿಬಂದಿಗೆ ಐದು ತಿಂಗಳುಗಳಿಂದ ವೇತನ ಸಿಕ್ಕಿಲ್ಲ, ಹೀಗಾಗಿ ಪೋಷಣ ಅಭಿಯಾನದ ಸಿಬಂದಿ ತಮಗೇ ಪೋಷಣೆ ಇಲ್ಲದಂತಹ ಸ್ಥಿತಿಯಲ್ಲಿದ್ದಾರೆ.

ಪೋಷಣ ಅಭಿಯಾನವು ಕೇಂದ್ರ ಸರಕಾರದ ಮಹತ್ವಾಕಾಂಕ್ಷಿ ಯೋಜನೆ. ಇದರ ಅನುಷ್ಠಾನಕ್ಕಾಗಿ ರಾಜ್ಯದ ಪ್ರತೀ ಜಿಲ್ಲೆಯಲ್ಲಿ ಜಿಲ್ಲಾ ಸಂಯೋಜಕರು ಹಾಗೂ ಪ್ರತೀ ಶಿಶು ಅಭಿವೃದ್ಧಿ ಯೋಜನಾ ಕಚೇರಿ ವ್ಯಾಪ್ತಿಯಲ್ಲಿ ಸಂಯೋಜಕರ ಸಹಿತ 300ಕ್ಕೂ ಅಧಿಕ ಸಿಬಂದಿ ಕಾರ್ಯನಿರ್ವಹಿಸುತ್ತಿದ್ದು, ರಾಜ್ಯಾದ್ಯಂತ ಯಾರಿಗೂ ವೇತನ ಲಭಿಸಿಲ್ಲ.

**ಮುಗಿಯದ ಗೋಳು**

2018ರಲ್ಲಿ ಪೋಷಣ ಅಭಿಯಾನ ಆರಂಭವಾದಂದಿನಿಂದಲೂ ಇದೇ ರೀತಿ ವೇತನ ಸಮಸ್ಯೆ ಎದುರಿಸುತ್ತಿದ್ದು, 5-6 ತಿಂಗಳಿಗೊಮ್ಮೆ ವೇತನ ಪಡೆಯುವ ಸ್ಥಿತಿ ಇದೆ. ಪ್ರಸ್ತುತ 2023ರ ಮಾರ್ಚ್‌ನಿಂದ ಬಿಡಿಗಾಸು ವೇತನವಿಲ್ಲದೆ ಕೆಲಸ ನಿರ್ವಹಿಸುತ್ತಿದ್ದಾರೆ.

ಇವರು ಗುತ್ತಿಗೆ ಆಧಾರದಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದು, ಕೇಂದ್ರ ಮತ್ತು ರಾಜ್ಯ ಸರಕಾರಗಳಿಂದ ಅನುದಾನ ಬಂದಂತೆ ರಾಜ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಮೂಲಕ ವೇತನ ಪಾವತಿಯಾಗುತ್ತದೆ. ಆದರೆ ಪ್ರಸ್ತುತ ಅನುದಾನ ಬಾರದೆ ವೇತನವೂ ಇಲ್ಲವಾಗಿದೆ. ಅಭಿಯಾನದ ಕಾರ್ಯಕ್ರಮಗಳ ಅನುಷ್ಠಾನಕ್ಕಾಗಿ ಇವರು ಹಲವೆಡೆ ಓಡಾಟ ನಡೆಸಬೇಕಾಗುತ್ತದೆ. ಹೀಗಾಗಿ ಅವರಿಗೆ ಪ್ರಯಾಣ ಭತ್ತೆ ಪಡೆಯುವ ಅವಕಾಶವಿದೆ. ಆದರೆ 2 ವರ್ಷಗಳಿಂದ ಅದೂ ಸಿಗುತ್ತಿಲ್ಲ.

**ಅಭಿಯಾನದ ಯಶಸ್ಸಿಗೆ ದುಡಿಮೆ**

ಅಪೌಷ್ಟಿಕತೆ ತಡೆಗಟ್ಟಲು ಅಂಗನವಾಡಿ ಮಟ್ಟದಲ್ಲಿ ಮೊಬೈಲ್ ಅಪ್ಲಿಕೇಶನ್ ಮೂಲಕ ನೋಂದಣಿಗೆ ಅಂಗನವಾಡಿ ಕಾರ್ಯಕರ್ತೆಯರಿಗೆ ತರಬೇತಿ ನೀಡುವುದು, ಅಭಿಯಾನದ ಕಾರ್ಯ ಚಟುವಟಿಕೆಗಳನ್ನು ಕ್ರೋಡೀಕರಿಸಿ ಪ್ರತೀದಿನ ನಿರ್ವಹಣೆ ಮಾಡುವುದು, ಫಲಾನುಭವಿಗಳ ಆಧಾರ್ ನೋಂದಣಿ, ಅಂಗನವಾಡಿ ಕಾರ್ಯಕರ್ತೆಯರು, ಸಹಾಯಕಿಯರ ಬ್ಯಾಂಕ್ ಖಾತೆಗೆ ಅಳವಡಿಕೆ ಈ ಸಿಬಂದಿಯ ಕರ್ತವ್ಯಗಳಾಗಿವೆ.

ಜತೆಗೆ ಕಾರ್ಯಕರ್ತೆಯರು, ಮೇಲ್ವಿಚಾರಕರಿಗೆ ವಿತರಿಸಲಾದ ಸ್ಮಾರ್ಟ್ ಫೋನ್ ನಿರ್ವಹಣೆ, ಕೇಂದ್ರ-ರಾಜ್ಯ ಸರಕಾರದ ವಿವಿಧ ವರದಿಗಳ ಮಾಹಿತಿ ಕ್ರೋಡೀಕರಣ- ಈ ಎಲ್ಲ ಕರ್ತವ್ಯಗಳ ಮೂಲಕ ಪೋಷಣ ಅಭಿಯಾನದ ಯಶಸ್ವಿಯಾಗಿ ದುಡಿಯುತ್ತಿದ್ದಾರೆ. ಕೋವಿಡ್ ಸಮಯದಲ್ಲಿ ಈ ಸಿಬಂದಿ ಆರೋಗ್ಯ ಇಲಾಖೆಯ ಜತೆ ಸೇರಿ ಕರ್ತವ್ಯ ನಿರ್ವಹಿಸಿದ್ದಾರೆ. ಆದರೆ ವೇತನ ಸಮಸ್ಯೆಯನ್ನು ಪ್ರತೀ ಬಾರಿ ಸರಕಾರದ ಗಮನಕ್ಕೆ ತಂದರೂ ಪರಿಹಾರ ಸಿಗುತ್ತಿಲ್ಲ ಎಂದು ಅಳಲು ತೋಡಿಕೊಂಡಿದ್ದಾರೆ.

**ಕರಾವಳಿಯಲ್ಲಿ ಎಷ್ಟು ಮಂದಿ ಬಾಧಿತರು?**

ಪೋಷಣ ಅಭಿಯಾನಕ್ಕೆ ಸಂಬಂಧಿಸಿ ದ.ಕ. ಜಿಲ್ಲೆಯಲ್ಲಿ ಜಿಲ್ಲಾ ಮಟ್ಟದಲ್ಲಿ ಜಿಲ್ಲಾ ಯೋಜನಾ ಸಂಯೋಜಕ ಹಾಗೂ ಯೋಜನಾ ಸಹಾಯಕ ಎಂಬ 2 ಹುದ್ದೆಗಳು, ಜಿಲ್ಲೆಯ 7 ಯೋಜನಾ (ಸಿಡಿಪಿಒ ಕಚೇರಿ) ಕಚೇರಿಗಳಲ್ಲಿ ತಲಾ ಒಬ್ಬೊಬ್ಬರು ಸಂಯೋಜಕರು (ಬ್ಲಾಕ್ ಕೋಆರ್ಡಿನೇಟರ್) ಸೇರಿ ಒಟ್ಟು 9 ಮಂದಿ ಇದ್ದಾರೆ.

ಉಡುಪಿ ಜಿಲ್ಲೆಯಲ್ಲಿ ಜಿಲ್ಲಾ ಮಟ್ಟದಲ್ಲಿ ಜಿಲ್ಲಾ ಯೋಜನಾ ಸಂಯೋಜಕ ಹಾಗೂ ಯೋಜನಾ ಸಹಾಯಕ ಎಂಬ 2 ಹುದ್ದೆಗಳು, ಜಿಲ್ಲೆಯ 4 ಯೋಜನಾ (ಸಿಡಿಪಿಒ ಕಚೇರಿ) ಕಚೇರಿಗಳಲ್ಲಿ ತಲಾ ಒಬ್ಬೊಬ್ಬರು ಸಂಯೋಜಕರು (ಬ್ಲಾಕ್ ಕೋಆರ್ಡಿನೇಟರ್) ಸೇರಿ ಒಟ್ಟು 6 ಮಂದಿ ಇದ್ದಾರೆ.

ಹಿಂದೆ ಸಿಡಿಪಿಒ ಕಚೇರಿ ವ್ಯಾಪ್ತಿಯಲ್ಲೂ ಸಹಾಯಕರಿದ್ದು, ಆದರೆ ಕಳೆದ ವರ್ಷದಿಂದ ಆ ಹುದ್ದೆಯನ್ನು ತೆಗೆದುಹಾಕಲಾಗಿದೆ. ಕಳೆದ ವರ್ಷ ಇದೇ ಸಿಬಂದಿಗೆ 9 ತಿಂಗಳವರೆಗೂ ವೇತನ ಆಗದೆ, ಬಳಿಕ ಅನುದಾನ ಬಿಡುಗಡೆಗೊಂಡು ವೇತನ ನೀಡಲಾಗಿತ್ತು.

> ಕೇಂದ್ರದಿಂದ ಬಜೆಟ್ ವಿಳಂಬವಾಗಿರುವ ಕಾರಣ ಪೋಷಣ ಅಭಿಯಾನ ಸಿಬಂದಿಯ ವೇತನ ಸಮಸ್ಯೆ ಇದೆ. ಕೇಂದ್ರದಿಂದ ಅನುದಾನವು ನಿರಂತರ ಪ್ರಕ್ರಿಯೆಯಾಗಿರುವುದಿಂದ ವಿಳಂಬವಾದರೂ ಬಂದೇ ಬರುತ್ತದೆ. ವೇತನ ಸಮಸ್ಯೆಯ ಕುರಿತು ಈಗಾಗಲೇ ಜಿ.ಪಂ. ಸಿಇಒ ಅವರ ಮೂಲಕ ಪತ್ರ ಬರೆಯಲಾಗಿದೆ.
>
> – ಪಾಪ ಭೋವಿ ಟಿ., ಬಿ.ಎಚ್. ಕೃಷ್ಣಪ್ಪ, ಉಪನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ, ದ.ಕ., ಉಡುಪಿ

**ವೇತನ ವಿವರ**

| | |
|---|---|
| ಜಿಲ್ಲಾ ಯೋಜನಾ ಸಂಯೋಜಕರು | 30 ಸಾವಿರ ರೂ. |
| ಯೋಜನಾ ಸಹಾಯಕ | 18 ಸಾವಿರ ರೂ. |
| ಸಿಡಿಪಿಒ ಕಚೇರಿಯ ಸಂಯೋಜಕರು | 20 ಸಾವಿರ ರೂ. |

# ಸ್ವಾತಂತ್ರ್ಯದ ಅಮೃತ ಮಹೋತ್ಸವ

# ಅಶೋಕನಗರದ ದೇವಸ್ಥಾನದಲ್ಲಿ ಪ್ರತೀದಿನ ಧ್ವಜಾರೋಹಣ!

ಉದಯವಾಣಿ ವಿಶೇಷ

ಮಂಗಳೂರು, ಆ. 7: ದೇಶದ 75ನೇ ಸ್ವಾತಂತ್ರ್ಯೋತ್ಸವವನ್ನು ಅರ್ಥಪೂರ್ಣವಾಗಿಸುವ ನಿಟ್ಟಿನಲ್ಲಿ ಮೂರು ದಿನಗಳ ಕಾಲ ಮನೆ ಮನೆಯಲ್ಲಿ ತ್ರಿವರ್ಣ ಧ್ವಜ ಹಾರಿಸುವಂತೆ ಪ್ರಧಾನಿ ನರೇಂದ್ರ ಮೋದಿ ಕಳೆದ ವರ್ಷ ನೀಡಿದ್ದ ಕರೆಗೆ ಇಡೀ ದೇಶವೇ ಸ್ಪಂದಿಸಿತ್ತು. ಅದನ್ನೇ ಪ್ರೇರಣೆಯಾಗಿ ಸ್ವೀಕರಿಸಿದ ಮಂಗಳೂರಿನ ಸಮುದಾಯವೊಂದು ತಮ್ಮ ದೇವಸ್ಥಾನ ಆವರಣದಲ್ಲಿ ಕಳೆದ ಆ. 15ರಿಂದ ನಾಡಿದ್ದು ಆ. 15ರ ವರೆಗೆ ಪ್ರತೀ ದಿನ ಧ್ವಜಾರೋಹಣ ನೆರವೇರಿಸುವ ಮೂಲಕ ಅಮೃತ ಮಹೋತ್ಸವವನ್ನು ವಿಭಿನ್ನವಾಗಿ ಆಚರಿಸುತ್ತಿದೆ.

ಉರ್ವಸ್ಟೋರ್ ಬಳಿಯ ಅಶೋಕನಗರದ ದೇವಾಂಗ ಸಮುದಾಯಕ್ಕೆ ಸೇರಿದ ಶ್ರೀ ಭಗವತೀ ದೇವಸ್ಥಾನ ಮತ್ತು ಕುಕ್ಕಾಡಿ ಶ್ರೀ ಅರಸು ಮುಂಡತ್ತಾಯ ದೈವಸ್ಥಾನದ ಆವರಣದಲ್ಲಿ 1 ವರ್ಷದಿಂದ ಈ ಪ್ರಕ್ರಿಯೆ ನೆರವೇರುತ್ತಿದ್ದು ಎಲ್ಲರ ಮೆಚ್ಚುಗೆಗೆ ಪಾತ್ರವಾಗಿದೆ.

'ಕಳೆದ ವರ್ಷದ ಸ್ವಾತಂತ್ರ್ಯ ಉತ್ಸವಕ್ಕೂ ಮುನ್ನ ಪ್ರಧಾನಿಯವರ ಕರೆಯನ್ವಯ ಆರಂಭಿಕ 3 ದಿನ ಎಲ್ಲರಂತೆ ನಾವೂ ಧ್ವಜಾರೋಹಣ ಮಾಡಿದ್ದೆವು. ಅದನ್ನು ಮೂರೇ ದಿನಕ್ಕೆ ಸೀಮಿತಗೊಳಿಸುವುದು ಸರಿಯಲ್ಲ ಎಂದು ಎಲ್ಲರ ಮನಸ್ಸಿನಲ್ಲಿ ಮೂಡಿದ ಕಾರಣ ನಿರಂತರವಾಗಿ ಧ್ವಜಾರೋಹಣ ಮಾಡುತ್ತಿದ್ದೇವೆ ಎನ್ನುತ್ತಾರೆ ದೇವಾಂಗ ಸಂಘಟನೆಯ ಪದಾಧಿಕಾರಿಗಳು.

ಉದಯವಾಣಿ ಜತೆಗೆ ಮಾತನಾಡಿದ ಶರಣಪ್ಪ ಅವರು, 'ಇದೊಂದು ರಾಷ್ಟ್ರ ಪ್ರೇಮದ ಕೆಲಸ. ಧ್ವಜವನ್ನು ಏರಿಸುವ, ಇಳಿಸುವ, ಮಡಚಿ ಇಡುವ ವಿಧಾನವನ್ನು ಕಲಿತು ಅದರಂತೆ ಮಾಡುತ್ತಿದ್ದೇನೆ. ಈ ಬಗ್ಗೆ ಹೆಮ್ಮೆ ಅನ್ನಿಸುತ್ತಿದೆ' ಎಂದರು.

**ಶರಣಪ್ಪ ಅವರ ನಿಷ್ಠೆಯ ಕಾಯಕ**



ರಾಷ್ಟ್ರಧ್ವಜವನ್ನು ಬೆಳಗ್ಗೆ ಆರೋಹಣ ಮಾಡಿ ಸಂಜೆ ಅವರೋಹಣ ಮಾಡಬೇಕು. ಇದನ್ನು ತಪ್ಪದೇ ಮಾಡುವವರು ಯಾರು ಎಂಬ ವಿಚಾರ ಬಂದಾಗ 'ಈ ಕೆಲಸ ನಾನು ಮಾಡುತ್ತೇನೆ' ಎಂದು ಮುಂದೆ ಬಂದವರು ಮೂಲತಃ ಬಾದಾಮಿಯವರಾಗಿದ್ದು, ಮಂಗಳೂರಿನಲ್ಲಿ ನೆಲೆಸಿರುವ ಶರಣಪ್ಪ ಅವರು. ದೇವಾಂಗ ಭವನದಲ್ಲೇ ವಾಸವಾಗಿರುವ ಅವರು ಪ್ರತೀ ದಿನ ಬೆಳಗ್ಗೆ 7.30ಕ್ಕೆ ಗೌರವ ಪೂರ್ವಕವಾಗಿ ಧ್ವಜವನ್ನು ಹಾರಿಸಿ ಸಂಜೆ ಇಳಿಸುತ್ತಿದ್ದಾರೆ. ಈ ಅವಧಿಯಲ್ಲಿ ಅವರು ಊರಿಗೆ ಕೂಡ ಹೋಗಿಲ್ಲ.

> ಕ್ಷೇತ್ರದ ಆವರಣದಲ್ಲಿ ಧ್ವಜಾರೋಹಣದ ಯೋಜನೆ ಆ ಕ್ಷಣಕ್ಕೆ ಬಂದ ಯೋಚನೆ. ಅನುಷ್ಠಾನಗೊಳಿಸುವಲ್ಲಿ ಒಳ್ಳೆಯ ವ್ಯಕ್ತಿಯೊಬ್ಬರು ಸಿಕ್ಕ ಕಾರಣ ವರ್ಷ ಕಾಲ ನಿರ್ವಿಘ್ನವಾಗಿ ನೆರವೇರಿತು. ಮುಂದಕ್ಕೆ ರಾಷ್ಟ್ರಪ್ರೇಮ ಉದ್ದೀಪನಗೊಳಿಸುವ ಇನ್ನೊಂದು ಉತ್ತಮ ಕಾರ್ಯಕ್ರಮವನ್ನು ಆಯೋಜಿಸುವ ಚಿಂತನೆ ಇದೆ.
>
> – ಕ್ಷಿತಿ ಮಮ್ಮೂಲ್ರು, ಕ್ಷೇತ್ರದ ಆಡಳಿತ ಮೊಕ್ತೇಸರರು

# ನವೋದಯ ಟ್ರಸ್ಟ್: ವಿಮಾ ಚೆಕ್ ವಿತರಣೆ



ಚೆಕ್ ಅನ್ನು ಸಂಸ್ಥೆಯ ಡಾ|ಎಂ.ಎನ್. ರಾಜೇಂದ್ರ ಕುಮಾರ್ ವಿತರಿಸಿದರು.

ಮಂಗಳೂರು, ಆ. 7: ಇತ್ತೀಚೆಗೆ ನಿಧನ ಹೊಂದಿದ ನವೋದಯ ಗ್ರಾಮ ವಿಕಾಸ ಚಾರಿಟೆಬಲ್ ಟ್ರಸ್ಟ್ ಪ್ರಾಯೋಜಿತ ನವೋದಯ ಸ್ವಸಹಾಯ ಸಂಘದ ಸದಸ್ಯ ಸಂತೋಷ್ ಕುಮಾರ್ ಅವರ ಕುಟುಂಬಕ್ಕೆ ವಿಮಾ ಮೊತ್ತದ ಚೆಕ್ ಅನ್ನು ಸೋಮವಾರ ವಿತರಿಸಲಾಯಿತು.

ಬಂಟ್ವಾಳ ತಾಲೂಕಿನ ಪೊಳಲಿಯಲ್ಲಿರುವ ಇಂಚರ ನವೋದಯ ಸ್ವಸಹಾಯ ಸಂಘದ ಸದಸ್ಯ ಸಂತೋಷ್ ಕುಮಾರ್ ರಸ್ತೆ ಅಪಘಾತದಲ್ಲಿ ಮರಣ ಹೊಂದಿದ್ದು, ಅವರ ತಾಯಿ ಜಯಂತಿ ಅವರಿಗೆ ವಿಮಾ ಯೋಜನೆಯ 1 ಲಕ್ಷ ರೂ.ಗಳ ಚೆಕ್ ಅನ್ನು ಸಂಸ್ಥೆಯ ಮ್ಯಾನೇಜಿಂಗ್ ಟ್ರಸ್ಟಿ ಹಾಗೂ ಎಸ್‌ಸಿಡಿಸಿಸಿ ಬ್ಯಾಂಕಿನ ಅಧ್ಯಕ್ಷ ಡಾ|ಎಂ.ಎನ್. ರಾಜೇಂದ್ರ ಕುಮಾರ್ ವಿತರಿಸಿದರು.

ಎಸ್‌ಸಿಡಿಸಿಸಿ ಬ್ಯಾಂಕಿನ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಗೋಪಾಲಕೃಷ್ಣ ಭಟ್, ಟ್ರಸ್ಟಿ ಸುನಿಲ್ ಕುಮಾರ್ ಬಜಗೋಳಿ, ಟ್ರಸ್ಟ್‌ನ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಪೂರ್ಣಿಮಾ ಶೆಟ್ಟಿ ಉಪಸ್ಥಿತರಿದ್ದರು.

# ವಿಶ್ವದ ಅತೀ ಎತ್ತರದ ಶಿಖರದಲ್ಲಿ ತುಳುನಾಡ ಧ್ವಜ ಹಾರಿಸಿದ ಉಡುಪಿಯ ಯುವಕ!




ಉಡುಪಿ, ಆ. 8: ಸಾಫ್ಟ್‌ವೇರ್ ಕೆಲಸಬಿಟ್ಟು ಸುಮಾರು 18 ಸಾವಿರಕ್ಕೂ ಅಧಿಕ ಕಿ.ಮೀ. ಪ್ರಯಾಣವನ್ನು ಬೈಕಿನಲ್ಲಿಯೇ ಏಕಾಂಗಿಯಾಗಿ ಮುಗಿಸಿ ತುಳುನಾಡಿನ ಧ್ವಜವನ್ನು ವಿಶ್ವದ ಅತೀ ಎತ್ತರದ ಲಡಾಖ್‌ನ ಉಮ್ಲಿಂಗ್ ಲಾ ಮತ್ತು ಮೌಂಟ್ ಎವರೆಸ್ಟ್ ಬೇಸ್ ಕ್ಯಾಂಪ್‌ನ ಮೇಲೆ ಉಡುಪಿಯ ಬ್ರಹ್ಮಗಿರಿಯ ಯುವಕ ಸಿದ್ವಿನ್ ಶೆಟ್ಟಿ (28) ಹಾರಿಸಿದ್ದಾರೆ.

ಟ್ರೆಕ್ಕಿಂಗ್‌ನಲ್ಲಿ ಆಸಕ್ತಿ ಹೊಂದಿದ್ದ ಇವರು 2023ರ ಮೇ 6ರಂದು ಉಡುಪಿಯಿಂದ ತನ್ನ ಹಿಮಾಲಯನ್ ಬೈಕ್‌ನಲ್ಲಿ ಪ್ರಯಾಣ ಆರಂಭಿಸಿ ಭಾರತದ 21 ರಾಜ್ಯಗಳು, 5 ಕೇಂದ್ರಾಡಳಿತ ಪ್ರದೇಶಗಳನ್ನು ಮತ್ತು ನೇಪಾಲ ಮತ್ತು ಭೂತಾನ್ ದೇಶಗಳನ್ನು ಸುತ್ತಿ ಜು. 19ರಂದು ಉಡುಪಿಗೆ ಮರಳಿದ್ದಾರೆ. ಇದರೊಂದಿಗೆ ವಿಶ್ವದ ಅತೀ ಎತ್ತರದ ಪ್ರದೇಶವಾದ ಉಮ್ಲಿಂಗ್ ಲಾ (19,024 ಅಡಿ), ಮೌಂಟ್ ಎವರೆಸ್ಟ್ ಬೇಸ್ ಕ್ಯಾಂಪ್ (17,598 ಅಡಿ ಎತ್ತರ) ಮತ್ತು ವಿಶ್ವದ ಅತೀ ಎತ್ತರದ ಶಿವ ದೇವಾಲಯ ತುಂಗನಾಥ್ ಅನ್ನು ಕೂಡ ಸ್ಪರ್ಶಿಸಿ ಬಂದಿದ್ದಾರೆ.

ಉಡುಪಿಯ ಸುರೇಶ್ ಕೃಷ್ಣ ಶೆಟ್ಟಿ ಮತ್ತು ಸುಜಯಾ ಎಸ್. ಶೆಟ್ಟಿ ಅವರ ಪುತ್ರ. ನಿಟ್ಟೆ ಕಾಲೇಜಿನಲ್ಲಿ ಕಂಪ್ಯೂಟರ್ ಸೈನ್ಸ್‌ನಲ್ಲಿ ಎಂಜಿನಿಯರಿಂಗ್ ಪದವಿ ಪಡೆದಿದ್ದಾರೆ. ಇಡೀ ದೇಶವನ್ನು ಸುತ್ತಿ ಅಲ್ಲಿನ ಶಿವ ದೇವಾಲಯಗಳನ್ನು ಸಂದರ್ಶಿಸಬೇಕು ಎನ್ನುವುದು ಅವರ ಆಸೆಯಾಗಿತ್ತು. ತುಳುನಾಡಿನ ಧ್ವಜವನ್ನು ವಿಶ್ವದ ಎತ್ತರದ ಪ್ರದೇಶದಲ್ಲಿ ಇದುವರೆಗೆ ಉಡುಪಿಯ ಯಾವುದೇ ಚಾರಣಿಗರು ಹಾರಿಸಿಲ್ಲ ಎನ್ನುತ್ತಾರೆ ಅವರು.

> ನನ್ನ ಈ ಪ್ರಯಾಣದ ಅವಧಿಯಲ್ಲಿ 50 ಡಿಗ್ರಿಗಳಿಂದ -16 ಡಿಗ್ರಿ ವರೆಗಿನ ತಾಪಮಾನವನ್ನು ತಡೆದುಕೊಂಡಿದ್ದೇನೆ. 100ಕ್ಕೂ ಅಧಿಕ ದೇವಸ್ಥಾನಗಳು, ಗುರುದ್ವಾರ, ಚರ್ಚ್ ಮತ್ತು ಮಸೀದಿಗಳ ವಾಸ್ತು ಶಿಲ್ಪವನ್ನು ವೀಕ್ಷಿಸುವ ಅವಕಾಶ ದೊರಕಿತು. ಈ ವೇಳೆ ಬಹುತೇಕ ಎಲ್ಲ ಧರ್ಮದ ಜನರೊಂದಿಗೆ ಬೆರೆಯುವ ಅವರೊಂದಿಗೆ ಸಂವಾದ ಮಾಡುವುದರೊಂದಿಗೆ ಅವರ ಸಂಸ್ಕೃತಿ, ಆಚಾರ-ವಿಚಾರಗಳನ್ನು ತಿಳಿಯಲು ಸಾಧ್ಯವಾಯಿತು. ಮೂರು ದೇಶಗಳ ಸಶಸ್ತ್ರ ಪಡೆಗಳ ಅಧಿಕಾರಿಗಳನ್ನು ಕೂಡ ಭೇಟಿಯಾಗಿದ್ದು ಮತ್ತೊಂದು ವಿಶೇಷ.
>
> – ಸಿದ್ವಿನ್ ಶೆಟ್ಟಿ

# ವೀಡಿಯೋ ಪ್ರಕರಣ ಸಿಐಡಿಗೆ

# ರಾಜ್ಯ ಸರಕಾರದಿಂದ ಮುಚ್ಚಿಹಾಕುವ ಹುನ್ನಾರ: ಯಶ್‌ಪಾಲ್ ಸುವರ್ಣ

ಉಡುಪಿ, ಆ. 7: ಇಲ್ಲಿನ ಖಾಸಗಿ ಪ್ಯಾರಾಮೆಡಿಕಲ್ ಕಾಲೇಜಿನಲ್ಲಿ ನಡೆದಿದೆ ಎನ್ನಲಾದ ವೀಡಿಯೋ ಚಿತ್ರೀಕರಣ ಪ್ರಕರಣವನ್ನು ತರಾತುರಿಯಲ್ಲಿ ಸಿಐಡಿಗೆ ವರ್ಗಾಯಿಸುವ ಮೂಲಕ ಪ್ರಕರಣವನ್ನು ಮುಚ್ಚಿಹಾಕುವ ಹುನ್ನಾರವನ್ನು ರಾಜ್ಯ ಸರಕಾರ ಮಾಡುತ್ತಿದೆ ಎಂದು ಶಾಸಕ ಯಶ್‌ಪಾಲ್ ಸುವರ್ಣ ಆರೋಪಿಸಿದ್ದಾರೆ.

ರಾಜ್ಯಾದ್ಯಂತ ಈ ಪ್ರಕರಣದ ಬಗ್ಗೆ ತೀವ್ರ ಜನಾಕ್ರೋಶ, ಪ್ರತಿಭಟನೆಗೆ ಮಣಿದ ಸರಕಾರ ಈ ಹಿಂದೆ ತನಿಖಾಧಿಕಾರಿಯನ್ನು ಬದಲಾಯಿಸಿದ ಬಳಿಕ ಉಡುಪಿ ಜಿಲ್ಲಾ ಪೊಲೀಸ್ ಇಲಾಖೆ ತನಿಖೆ ತೀವ್ರಗೊಳಿಸಿ ಪ್ರಕರಣದ ಸಂತ್ರಸ್ತರು ಹಾಗೂ ಆರೋಪಿ ವಿದ್ಯಾರ್ಥಿನಿಯರನ್ನು ನ್ಯಾಯಾಧೀಶರ ಮುಂದೆ ಹಾಜರುಪಡಿಸಿ ಹೇಳಿಕೆ ಪಡೆಯುವ ಮೂಲಕ ಹಲವು ಪೂರಕ ಸಾಕ್ಷ್ಯಗಳನ್ನು ಸಂಗ್ರಹಿಸಿತ್ತು.

ಮಾತ್ರವಲ್ಲದೆ ಆರೋಪಿ ವಿದ್ಯಾರ್ಥಿನಿಯ ತಂದೆ ನಿಷೇಧಿತ ಪಿಎಫ್ಐ ಸಂಘಟನೆಯ ಸಕ್ರಿಯ ಸದಸ್ಯ ಎಂಬ ಮಾಹಿತಿಗಳು ಕೂಡ ತನಿಖೆಯಲ್ಲಿ ಬೆಳಕಿಗೆ ಬಂದಿತ್ತು. ಈಗ ಜಿಲ್ಲಾ ಪೊಲೀಸರ ತನಿಖೆ ಪೂರ್ಣಗೊಳ್ಳುವ ಮುನ್ನವೇ ತರಾತುರಿಯಲ್ಲಿ ಸಿಐಡಿಗೆ ವರ್ಗಾಯಿಸುವ ಮೂಲಕ ರಾಜ್ಯ ಸರಕಾರದ ನಡೆ ಮತ್ತೊಮ್ಮೆ ಗೊಂದಲ ಸೃಷ್ಟಿಸಿದೆ. ಪ್ರಕರಣದ ಆರಂಭದ ದಿನದಿಂದಲೂ ಪೊಲೀಸ್ ಇಲಾಖೆಗೆ ಪ್ರತೀ ಹಂತದಲ್ಲೂ ಪ್ರಭಾವ ಬೀರುವ ಯತ್ನ ಮಾಡಿದ್ದ ಸರಕಾರ ಈಗ ಆರೋಪಿಗಳನ್ನು ರಕ್ಷಿಸುವ ಸಲುವಾಗಿಯೇ ಸಿಐಡಿಗೆ ವರ್ಗಾಯಿಸಿದೆ ಎಂದು ಆರೋಪಿಸಿದ್ದಾರೆ.

# ‘ಗ್ಯಾರಂಟಿ’ಗಳಿಂದ ದೇಶಕ್ಕೆ ವಿಪತ್ತು’

ಮಂಗಳೂರು, ಆ. 7: ಅನುಷ್ಠಾನಗೊಳಿಸಲಾಗದ ಗ್ಯಾರಂಟಿ ಯೋಜನೆಗಳನ್ನು ಘೋಷಿಸುವುದು ದೇಶದ ಆರ್ಥಿಕತೆಗೆ ವಿಪತ್ತು ತರಲಿದೆ. ಗ್ಯಾರಂಟಿಗಳಿಂದಾಗಿ ಯಾವುದೇ ಅಭಿವೃದ್ಧಿ ಕಾರ್ಯ ಕೈಗೊಳ್ಳುವುದು ಅಸಾಧ್ಯ ಎಂದು ಬಿಜೆಪಿ ರಾಷ್ಟ್ರೀಯ ವಕ್ತಾರೆ ಶಾಜಿಯಾ ಇಲ್ಮಿ ಪತ್ರಿಕಾಗೋಷ್ಠಿಯಲ್ಲಿ ಹೇಳಿದರು.

ಈಗಾಗಲೇ ಪಂಜಾಬ್ ಸರಕಾರ ಇಂತಹ ಗ್ಯಾರಂಟಿ ಯೋಜನೆಗಳಿಂದಾಗಿ ಸಾಲದ ಸುಳಿಗೆ ಸಿಲುಕಿದೆ. ಸದ್ಯ ಕರ್ನಾಟಕದಲ್ಲಿ ಕಾಂಗ್ರೆಸ್ ಸರಕಾರ ಹಣಕಾಸು ಇಲಾಖೆಯ ಸಲಹೆಗಳ ಹೊರತಾಗಿ ಗ್ಯಾರಂಟಿ ಯೋಜನೆಗಳನ್ನು ಅನುಷ್ಠಾನಕ್ಕೆ ಹೊರಟಿದೆ. ಕಾಂಗ್ರೆಸ್ ನಾಯಕರು ಕರ್ನಾಟಕ ಮಾದರಿಯನ್ನೇ ದೇಶದಲ್ಲೂ ತರುವುದಾಗಿ ಹೇಳುತ್ತಿದ್ದಾರೆ. ಇದು ದೇಶಕ್ಕೆ ಆತಂಕಕಾರಿ ಎಂದರು.

ಎನ್‌ಡಿಎ ಎಂದೂ ಗ್ಯಾರಂಟಿಯಂತಹ ಚುನಾವಣ ಘೋಷಣೆಗಳನ್ನು ಹಾಕಿಲ್ಲ, ಅಭಿವೃದ್ಧಿ ಕಾರ್ಯಗಳು, ಫಲಾನುಭವಿಗಳಿಗೆ ನೇರವಾಗಿ ಮೊತ್ತ ವರ್ಗಾವಣೆ, ಭ್ರಷ್ಟಾಚಾರ ರಹಿತ ಆಡಳಿತದಿಂದಾಗಿ ಮತ್ತೆ ಮತ್ತೆ ಅಧಿಕಾರಕ್ಕೆ ಬಂದಿದೆ. ಕಿಸಾನ್ ಸಮ್ಮಾನ್, ಉಜ್ವಲ ಮತ್ತಿತರ ಯೋಜನೆಗಳು ಬಜೆಟ್‌ನಲ್ಲಿ ಮೀಸಲಿಟ್ಟಿದ್ದು ಹೊರತು ಘೋಷಣೆಗಳಲ್ಲ, ಇವೆಲ್ಲದರಿಂದ ಜನಸಾಮಾನ್ಯರಿಗೆ ಅನುಕೂಲವಾಗಿದೆ. ಹಾಗಾಗಿ ಕಾಂಗ್ರೆಸ್ ಮುಂಬರುವ ಯೋಜನೆಯಲ್ಲಿ ಜನರನ್ನು ಮರುಳು ಮಾಡುವುದು ಅಸಾಧ್ಯ ಎಂದರು.

ಬಿಜೆಪಿ ಜಿಲ್ಲಾಧ್ಯಕ್ಷ ಸುದರ್ಶನ ಎಂ., ಶಾಸಕ ವೇದವ್ಯಾಸ ಕಾಮತ್, ಜಗದೀಶ್ ಶೇಣವ, ರವಿಶಂಕರ ಮಿಜಾರ್, ರಣದೀಪ್ ಕಾಂಚನ್ ಇದ್ದರು.

# ಪ್ರಯಾಣಿಕರನ್ನು ಬಿಟ್ಟು ಬಂದ ವಿಮಾನ!

ಮಂಗಳೂರು, ಆ. 7: ನಿಗದಿತ ಸಮಯಕ್ಕಿಂತ ಕೊಂಚ ಮುನ್ನವೇ ಹೊರಟ ವಿಮಾನದಿಂದಾಗಿ ಮಂಗಳೂರಿಗೆ ಆಗಮಿಸಬೇಕಿದ್ದ 6 ಪ್ರಯಾಣಿಕರು ಬೆಂಗಳೂರು ವಿಮಾನ ನಿಲ್ದಾಣದಲ್ಲೇ ಬಾಕಿ ಆದ ಘಟನೆ ವರದಿಯಾಗಿದೆ.

ಮಧ್ಯಾಹ್ನ 2.55ಕ್ಕೆ ಬೆಂಗಳೂರಿನಿಂದ ಮಂಗಳೂರಿಗೆ ನಿಗದಿಯಾಗಿದ್ದ ಇಂಡಿಗೋ ವಿಮಾನ 12 ನಿಮಿಷ ಬೇಗ ಪ್ರಯಾಣ ಬೆಳೆಸಿದ ಕಾರಣದಿಂದ 6 ಪ್ರಯಾಣಿಕರಿಗೆ ಸಮಸ್ಯೆ ಆಗಿದೆ. ಘಟನೆಯನ್ನು ನಿರಾಕರಿಸಿದ ವಿಮಾನಯಾನ ಸಂಸ್ಥೆ ನಿಗದಿತ ಸಮಯದಲ್ಲೇ ವಿಮಾನ ಸಂಚಾರ ನಡೆಸಿದೆ. ಪ್ರಯಾಣಿಕರು ಬರುವಾಗ ತಡ ಆಗಿತ್ತು ಎಂದು ತಿಳಿಸಿದ್ದಾರೆ.

# ಭೂತಾನ್ ಅಡಿಕೆ ಆಮದು ಕಳವಳ ಬೇಡ: ಕ್ಯಾಂಪ್ಕೊ

ಮಂಗಳೂರು, ಆ. 7: ಭೂತಾನ್‌ನಿಂದ ಹಸುರು ಅಡಿಕೆಯನ್ನು ಆಮದು ಮಾಡಿಕೊಳ್ಳುವ ಕೇಂದ್ರ ಸರಕಾರದ ನಿರ್ಧಾರವು ಸ್ಥಳೀಯ ಮಾರುಕಟ್ಟೆಯ ಬೆಲೆಗಳಲ್ಲಿ ಸಂಭಾವ್ಯ ಇಳಿಕೆಯ ಬಗ್ಗೆ ದೇಶೀಯ ರೈತರಲ್ಲಿ ಕಳವಳವನ್ನು ಹುಟ್ಟುಹಾಕಿರಬಹುದು. ಆದರೆ ಈ ಬಗ್ಗೆ ಕಂಗಾಲಾಗುವ ಅಗತ್ಯವಿಲ್ಲ ಎಂದು ಕ್ಯಾಂಪ್ಕೊ ಅಧ್ಯಕ್ಷ ಎ. ಕಿಶೋರ್ ಕುಮಾರ್ ಕೊಡ್ಗಿ ತಿಳಿಸಿದ್ದಾರೆ.

ಭೂತಾನ್‌ನಿಂದ ಹಸುರು ಅಡಿಕೆ ಆಮದು ನಮ್ಮ ದೇಶದ ಒಟ್ಟು ಉತ್ಪಾದನೆಗೆ ಹೋಲಿಸಿದಾಗ ಅತೀ ಕಡಿಮೆ ಇದ್ದು ದೇಶೀಯ ಮಾರುಕಟ್ಟೆ ದರಗಳ ಮೇಲೆ ಪರಿಣಾಮ ಬೀರುವುದಿಲ್ಲ, ಸ್ಥಳೀಯ ರೈತರು ಉತ್ಪಾದಿಸುವ ಬಿಳಿ ಅಡಿಕೆ ಬೆಲೆಯಲ್ಲಿ ಯಾವುದೇ ಪರಿಣಾಮ ಬೀರದು ಎಂದು ಅವರು ತಿಳಿಸಿದ್ದಾರೆ.

# ಕೃಷಿ ಸಚಿವರ ರಾಜೀನಾಮೆಗೆ ಬಿಜೆಪಿ ಆಗ್ರಹ

ಉಡುಪಿ, ಆ. 7: ನಕಲಿ ಗ್ಯಾರಂಟಿಗಳ ಮೂಲಕ ರಾಜ್ಯದ ಜನತೆಯ ದಾರಿ ತಪ್ಪಿಸಿ, ರಾಜ್ಯವನ್ನು ದಿವಾಳಿಯ ಅಂಚಿಗೆ ಕೊಂಡೊಯ್ಯಲು ಹರಸಾಹಸ ಪಡುತ್ತಿರುವ ಕಾಂಗ್ರೆಸ್ ನೇತೃತ್ವದ ರಾಜ್ಯ ಸರಕಾರದಲ್ಲಿ ಲಂಚಾವತಾರ ಮೇಳೈಸಿರುವುದು ನಾಚಿಕೆಗೇಡಿನ ಸಂಗತಿಯಾಗಿದೆ. ಸರಕಾರವು ತತ್‌ಕ್ಷಣ ಲಂಚ ಕೇಳಿರುವ ಕೃಷಿ ಸಚಿವ ಚೆಲುವರಾಯ ಸ್ವಾಮಿ ಅವರ ರಾಜೀನಾಮೆ ಪಡೆದು, ಪ್ರಕರಣವನ್ನು ನ್ಯಾಯಾಂಗ ತನಿಖೆಗೆ ಒಳಪಡಿಸಬೇಕು ಎಂದು ಬಿಜೆಪಿ ಉಡುಪಿ ಜಿಲ್ಲಾಧ್ಯಕ್ಷ ಕುಯಿಲಾಡಿ ಸುರೇಶ್ ನಾಯಕ್ ಆಗ್ರಹಿಸಿದ್ದಾರೆ.

ಕಾಂಗ್ರೆಸ್ ರಾಜ್ಯದಲ್ಲಿ ಅಧಿಕಾರಕ್ಕೆ ಬಂದ ಎರಡೇ ತಿಂಗಳಲ್ಲಿ ವರ್ಗಾವಣೆ ಕಮಿಷನ್ ದಂಧೆ ರಾಜಾರೋಷವಾಗಿ ನಡೆಯುತ್ತಿದೆ. ಮುಖ್ಯಮಂತ್ರಿಗಳು ಭ್ರಷ್ಟಾಚಾರಿಗಳ ವಿರುದ್ಧ ಕಠಿನ ಕ್ರಮ ಜರಗಿಸಿ ಭ್ರಷ್ಟಾಚಾರ ಮುಕ್ತ ಆಡಳಿತ ನೀಡುವ ಧೈರ್ಯ ತೋರಲಿ ಎಂದು ಸುರೇಶ್ ನಾಯಕ್ ಸರಕಾರವನ್ನು ಆಗ್ರಹಿಸಿದ್ದಾರೆ.

**ನಿವೃತ್ತ ಬ್ಯಾಂಕ್ ನೌಕರರ ಹಾಗೂ ಅಧಿಕಾರಿಗಳ ಕ್ರೆಡಿಟ್ ಸೌಹಾರ್ದ ಕೋ-ಅಪರೇಟಿವ್ ನಿಯಮಿತ**

ನೋಂದಣಿ ಸಂಖ್ಯೆ: 3014/2019-20 : 06.11.2019
ಶೇಡಿಗುರಿ, ಮಂಗಳೂರು 575006

**ಪತ್ರಿಕಾ ಪ್ರಕಟಣೆ**

ನಮ್ಮ ಸಂಘದ 2022-2023ನೇ ಸಾಲಿನ ಮಹಾಸಭೆಯು ತಾ 03.09.2023 (ರವಿವಾರ) ರಂದು ಪೂರ್ವಾಹ್ನ 10.30 ಕ್ಕೆ ಸರಿಯಾಗಿ ಜರುಗಿಸಲು ತೀರ್ಮಾನಿಸಲಾಗಿದೆ.
ಸ್ಥಳ : ರೋಟರಿ ಬಾಲಭವನ, ಮಣ್ಣಗುಡ್ಡ ಮಂಗಳೂರು,
ಸಂಘದ ಎಲ್ಲಾ ಸದಸ್ಯರುಗಳು ಸದ್ರಿ ಸಭೆಯಲ್ಲಿ ಭಾಗವಹಿಸಲು ವಿನಂತಿ.
ಸ್ಥಳ: ಮಂಗಳೂರು
ದಿನಾಂಕ: 08.08.2023
ಮುಖ್ಯ ಕಾರ್ಯ ನಿರ್ವಹಣಾ ಅಧಿಕಾರಿ

**ಶ್ರೀ ಕೃಷ್ಣ ಮಠ**

ಜಗದ್ಗುರು ಶ್ರೀ ಮಧ್ವಾಚಾರ್ಯ ಮೂಲ ಮಹಾಸಂಸ್ಥಾನ-
ಶ್ರೀ ಜನಾರ್ದನತೀರ್ಥಪರಂಪರೆ, ಪರ್ಯಾಯ ಶ್ರೀಕೃಷ್ಣಾಪುರ ಮಠ, ಉಡುಪಿ.

ದಿನಾಂಕ: 08-08-2023 (ಮಂಗಳವಾರ) ಇಂದಿನ ಕಾರ್ಯಕ್ರಮಗಳು
ಬೆಳಿಗ್ಗೆ ಘಂಟೆ 10.00ಕ್ಕೆ : ಮಧ್ಯಾಹ್ನ ಮಹಾಪೂಜೆ.
ಸಂಜೆ ಘಂಟೆ 04.00ಕ್ಕೆ : ಚಂದ್ರಶಾಲೆ ಪುರಾಣ. ವಿಷಯ : ಶ್ರೀಮದ್ಭಾಗವತ ಮಹಾತ್ಮ್ಯೆ. ಪ್ರವಚನಕಾರರು : ವಿದ್ವಾನ್ ಶ್ರೀ ಬನ್ನಂಜೆ ಗೋಪಾಲಕೃಷ್ಣ ಉಪಾಧ್ಯ. ಸಂಜೆ ಘಂಟೆ 06.00ರಿಂದ ರಾಜಾಂಗಣದಲ್ಲಿ: ನಿರಂತರ ಜ್ಞಾನ ಯಜ್ಞ ಪ್ರವಚನ. ಪ್ರವಚನಕಾರರು : ವಿದ್ವಾನ್ ಶ್ರೀ ವಿಷ್ಣುವರ್ಧನ ಆಚಾರ್ಯ, ಉಡುಪಿ. ವಿಷಯ : ಶ್ರೀಮನ್ಮಹಾಭಾರತದ ಸಂದೇಶಗಳು.
ರಾತ್ರಿ ಘಂಟೆ 07.30ಕ್ಕೆ : ಚಾಮರ ಸೇವೆ, ರಾತ್ರಿ ಪೂಜೆ.
ಸಂಜೆ ಗಂಟೆ 05.30ರಿಂದ ಮಧ್ವಮಂಟಪದಲ್ಲಿ: ಶ್ರೀಮತಿ ರಮ್ಯಾ ಸುಧೀರ್, ಬೆಂಗಳೂರು ಇವರಿಂದ ಕರ್ನಾಟಕ ಶಾಸ್ತ್ರೀಯ ಸಂಗೀತ.

**ಕರ್ನಾಟಕ ಬ್ಯಾಂಕ್ ಲಿ.**

(ನೋಂದಾಯಿತ ಕಚೇರಿ: ಮಹಾವೀರ ವೃತ್ತ, ಕಂಕನಾಡಿ, ಮಂಗಳೂರು-575 002)
ಕಂಪನಿ ಗುರುತು ಸಂಖ್ಯೆ : L85110KA1924PLC001128, ಇ-ಮೇಲ್ : investor.grievance@ktkbank.com
(ಕಂಪನಿ ಜಾಲತಾಣ : www.karnatakabank.com ದೂ. ನಂ. : 0824-2228222)

**99ನೇ ವಾರ್ಷಿಕ ಮಹಾಸಭೆ (AGM) ಯನ್ನು ವಿದ್ಯುನ್ಮಾನ ಮಾಧ್ಯಮದ (VC/OAVM) ಮೂಲಕ ನಡೆಸುವ ಕುರಿತು**

1. ಈ ಮೂಲಕ ಬ್ಯಾಂಕಿನ ಸದಸ್ಯರಿಗೆ ತಿಳಿಯಪಡಿಸುವುದೇನೆಂದರೆ, ಕಂಪನಿ ಕಾಯಿದೆ, 2013 ಮತ್ತು ಕಾರ್ಪೊರೇಟ್ ವ್ಯವಹಾರಗಳ ಸಚಿವಾಲಯ (MCA) ಹೊರಡಿಸಿರುವ ಸುತ್ತೋಲೆ ಸಂಖ್ಯೆ 10/2022 ಮತ್ತು 11/2022 ದಿನಾಂಕ 28.12.2022 ಹಾಗೂ ಸಂಬಂಧಿತ ಸುತ್ತೋಲೆ ಮತ್ತು ಕಾನೂನುಗಳಿಗೆ ಅನುಸಾರವಾಗಿ ಬ್ಯಾಂಕಿನ 99ನೇ ವಾರ್ಷಿಕ ಮಹಾಸಭೆಯು (AGM) **ಆಗಸ್ಟ್ 29, 2023ರ ಮಂಗಳವಾರ ಪೂರ್ವಾಹ್ನ 11.30 ಗಂಟೆಗೆ** ವಿದ್ಯುನ್ಮಾನ ಮಾಧ್ಯಮ (VC) ಅಥವಾ ಇತರ ಆಡಿಯೋ ವಿಶ್ಯುವಲ್ ಮಾಧ್ಯಮಗಳ ಮೂಲಕ (OAVM) ಜರುಗಲಿದೆ.
2. ಈ ಮೇಲೆ ಹೇಳಿದಂತೆ, ಸಂಬಂಧಪಟ್ಟ ಕಾನೂನುಗಳಿಗೆ ಅನುಸಾರವಾಗಿ ಬ್ಯಾಂಕಿನ ಸದಸ್ಯರಿಗೆ ವಾರ್ಷಿಕ ಮಹಾಸಭೆಯ ನೋಟೀಸು ಮತ್ತು 2022-2023ನೇ ಹಣಕಾಸು ವರ್ಷದ ವಾರ್ಷಿಕ ವರದಿಯನ್ನು ಬ್ಯಾಂಕಿನ ರಿಜಿಸ್ಟ್ರಾರ್ ಮತ್ತು ಷೇರು ವರ್ಗಾವಣೆ ಏಜೆಂಟ್ (RTA) / ಡಿಪಾಸಿಟರಿರವರೊಂದಿಗೆ ನೋಂದಾಯಿಸಲಾದ ಇ-ಮೇಲ್ ವಿಳಾಸಕ್ಕೆ ವಿದ್ಯುನ್ಮಾನ ಮಾಧ್ಯಮದ ಮೂಲಕ, ಈಗಾಗಲೇ ರವಾನಿಸಲಾಗಿರುತ್ತದೆ. ಬ್ಯಾಂಕಿನ ವಾರ್ಷಿಕ ಮಹಾಸಭೆ ಮತ್ತು ವಾರ್ಷಿಕ ವರದಿಯು ಬ್ಯಾಂಕ್‌ನ ಜಾಲತಾಣ https://karnatakabank.com/investor-portal, ಸ್ಟಾಕ್ ಎಕ್ಸ್‌ಚೇಂಜ್ ಜಾಲತಾಣ (www.bseindia.com/www.nseindia.com) ಡಿಪಾಸಿಟರಿಯವರ ಜಾಲತಾಣ ಮತ್ತು https://www.evotingindia.comನಲ್ಲೂ ಕೊಡಮಾಡಲಾಗುವುದು
3. ತಮ್ಮ ಇ-ಮೇಲ್ ವಿಳಾಸಗಳನ್ನು ನೋಂದಾಯಿಸದ ಷೇರುದಾರರೂ ಕೂಡಾ ರಿಮೋಟ್ ಇ-ವೋಟಿಂಗ್ ಮೂಲಕ ಅಥವಾ ಮಹಾಸಭೆ ಜಾರಿಯಲ್ಲಿರುವ ಸಮಯದಲ್ಲಿ ಇವೋಟಿಂಗ್ ಮೂಲಕ ಮತ ಚಲಾಯಿಸಲು ಅರ್ಹರಾಗಿರುತ್ತಾರೆ. ಅಂತೆಯೇ, ಸದಸ್ಯರು ಮತ ಚಲಾಯಿಸಲು ಅನುಸರಿಸಬೇಕಾದ ಕ್ರಮಗಳನ್ನು ಮಹಾಸಭೆಯ ನೋಟೀಸಿನಲ್ಲಿ ವಿವರವಾಗಿ ನೀಡಲಾಗುವುದು.
4. ನಿರ್ದೇಶಕರ ಮಂಡಳಿಯು 2022-23ನೇ ಹಣಕಾಸು ವರ್ಷಕ್ಕೆ ಸಂಬಂಧಿಸಿದಂತೆ ಪ್ರತಿ ಷೇರಿಗೆ ರೂ 5/-ರ ಲಾಭಾಂಶವನ್ನು ಶಿಫಾರಸು ಮಾಡಿದೆ. ಲಾಭಾಂಶವನ್ನು ಪಡೆಯಲು ಅರ್ಹರಾದ ಸದಸ್ಯರನ್ನು ಗುರುತಿಸುವ ಉದ್ದೇಶಕ್ಕಾಗಿ 22.08.2023ನ್ನು ನಿಗದಿತ ದಿನಾಂಕವನ್ನಾಗಿ (Record Date) ಘೋಷಿಸಲಾಗಿದೆ. ಷೇರುದಾರರ ಅನುಮೋದನೆಯ ನಂತರದಲ್ಲಿ, ಲಾಭಾಂಶವನ್ನು ವಿದ್ಯುನ್ಮಾನ ಪಾವತಿ ವ್ಯವಸ್ಥೆಯ ಮೂಲಕ ಪಾವತಿಸಲಾಗುತ್ತದೆ (ಬ್ಯಾಂಕ್ ಖಾತೆಯ ಸರಿಯಾದ ಮತ್ತು ಸಂಪೂರ್ಣ ವಿವರಗಳು ಲಭ್ಯವಿದ್ದಲ್ಲಿ). ಬ್ಯಾಂಕ್ ಖಾತೆಯ ವಿವರಗಳು ಅಪೂರ್ಣವಿದ್ದಲ್ಲಿ ಲಾಭಾಂಶವನ್ನು ಡಿವಿಡೆಂಡ್ ವಾರಂಟ್‌ಗಳ ರೂಪದಲ್ಲಿ ಪಾವತಿಸಲಾಗುತ್ತದೆ. ಲಾಭಾಂಶವನ್ನು ತಮ್ಮ ಬ್ಯಾಂಕ್ ಖಾತೆಯಲ್ಲಿ ನೇರವಾಗಿ ಪಡೆಯಲು ಹಾಗೂ ಲಾಭಾಂಶ ಪಡೆಯುವಲ್ಲಿನ ವಿಳಂಬವನ್ನು ತಪ್ಪಿಸಲು, ಬ್ಯಾಂಕ್ ಖಾತೆಯ ಸರಿಯಾದ ಮತ್ತು ಸಂಪೂರ್ಣ ವಿವರಗಳನ್ನು ಷೇರುದಾರರು ತಮ್ಮ DPಗಳೊಂದಿಗೆ (ಡಿಮ್ಯಾಟ್ ರೂಪದಲ್ಲಿ ಷೇರುಗಳನ್ನು ಹೊಂದಿರುವವರು) ಅಥವಾ RTAಗೆ (ಭೌತಿಕ ರೂಪದಲ್ಲಿ ಷೇರುಗಳನ್ನು ಹೊಂದಿರುವ ವರು) ನೀಡಬೇಕಾಗಿ ಕೋರುತ್ತೇವೆ.
5. ಆದಾಯ ತೆರಿಗೆ ಕಾಯಿದೆ, 1961ರ ಪ್ರಕಾರ (ಹಣಕಾಸು ಕಾಯಿದೆ, 2020ರ ತಿದ್ದುಪಡಿಯಂತೆ), ಏಪ್ರಿಲ್ 1, 2020ರಂದು ಅಥವಾ ನಂತರ ಕಂಪನಿಗಳು ಪಾವತಿಸಿದ ಅಥವಾ ವಿತರಿಸಿದ ಅಥವಾ ವಿತರಿಸಿದ ಲಾಭಾಂಶವು ಆದಾಯ ತೆರಿಗೆಗೆ ಒಳಪಟ್ಟಿರುತ್ತದೆ ಎಂಬುದನ್ನು ಷೇರುದಾರರು ಗಮನಿಸಬಹುದು. ಆದ್ದರಿಂದ, ನಿಗದಿತ ದರದಲ್ಲಿ ತೆರಿಗೆಯನ್ನು ಮೂಲದಲ್ಲಿ (TDS) ಕಡಿತಗೊಳಿಸುವುದು ಕಡ್ಡಾಯವಾಗಿರುತ್ತದೆ. ಸೂಕ್ತವಾದ TDS ದರವನ್ನು ನಿರ್ಧರಿಸಲು ಐಟಿ ಕಾಯಿದೆಯ (IT Act) ನಿಬಂಧನೆಗಳಿಗೆ ಅನುಗುಣವಾಗಿ ಸಂಬಂಧಿತ ದಾಖಲೆಗಳನ್ನು ಸಲ್ಲಿಸಲು ಸದಸ್ಯರನ್ನು ವಿನಂತಿಸಲಾಗಿದೆ ಮತ್ತು ಈ ವಿವರಗಳನ್ನು ವಾರ್ಷಿಕ ಮಹಾಸಭೆಯ ನೋಟಿಸಿನಲ್ಲೂ ನೀಡಲಾಗುವುದು.
6. ಸದಸ್ಯರ ದಾಖಲಾತಿ ಪುಸ್ತಕ ಮತ್ತು ಬ್ಯಾಂಕ್‌ನ ಷೇರು ವರ್ಗಾವಣೆ ಪುಸ್ತಕಗಳು ಆಗಸ್ಟ್ 23, 2023 ರಿಂದ ಆಗಸ್ಟ್ 29, 2023 ರವರೆಗೆ (ಎರಡೂ ದಿನಗಳನ್ನು ಒಳಗೊಂಡಂತೆ) ಮುಚ್ಚಿರುತ್ತವೆ.

ಸ್ಥಳ : ಮಂಗಳೂರು
ದಿನಾಂಕ : 07.08.2023

ಕರ್ನಾಟಕ ಬ್ಯಾಂಕ್ ಲಿಮಿಟೆಡ್ ಪರವಾಗಿ,
ಶಾಮ್ ಕೆ.
ಕಂಪನಿ ಕಾರ್ಯದರ್ಶಿ

# Ramco Systems Limited

ramco

**Registered Office : 47, PSK Nagar, Rajapalayam - 626 108.**
**Corporate Office : 64, Sardar Patel Road, Taramani, Chennai - 600 113.**
CIN: L72300TN1997PLC037550 E-mail: investorrelations@ramco.com Website: www.ramco.com

**Extract of Consolidated Financial Results for the Quarter Ended June 30, 2023**

| | Particulars | Quarter Ended | | | | | | Year Ended | |
|---|---|---|---|---|---|---|---|---|---|
| | | June 30, 2023 | | March 31, 2023 | | June 30, 2022 | | March 31, 2023 | |
| | | Unaudited | | Audited (Ref. note) | | Unaudited | | Audited | |
| | | Rs. Mln. | USD Mln. | Rs. Mln. | USD Mln. | Rs. Mln. | USD Mln. | Rs. Mln. | USD Mln. |
| 1 | Total income from operations | 1,399.42 | 17.13 | 1,282.68 | 15.68 | 1,209.47 | 15.84 | 4,977.32 | 62.48 |
| 2 | Net profit / (loss) for the period (before tax, exceptional items) | (483.03) | (5.91) | (569.58) | (6.96) | (503.41) | (6.59) | (2,206.75) | (27.70) |
| 3 | Net profit / (loss) for the period before tax (after exceptional items) | (483.03) | (5.91) | (569.58) | (6.96) | (503.41) | (6.59) | (2,206.75) | (27.70) |
| 4 | Net profit / (loss) for the period after tax (after exceptional items) | (468.04) | (5.73) | (454.03) | (5.52) | (507.27) | (6.64) | (2,068.59) | (25.97) |
| 5 | Total comprehensive income for the period (comprising profit / (loss) for the period (after tax) and other comprehensive income (after tax)) | (420.34) | (5.08) | (481.45) | (5.52) | (417.10) | (9.00) | (1,976.01) | (30.33) |
| 6 | Equity share capital (face value of Rs.10 each) | 352.75 | 6.62 | 352.63 | 6.62 | 308.51 | 6.08 | 352.63 | 6.62 |
| 7 | Reserves (excluding revaluation reserve) as shown in the Balance Sheet | | | | | | | 4,978.79 | 58.59 |
| 8 | Earnings per share for the period (before and after extraordinary items) of Rs.10 each, in Rs. and USD: (Annualised only for yearly figures) | | | | | | | | |
| | Basic | (13.27) | (0.16) | (14.45) | (0.18) | (16.45) | (0.22) | (65.60) | (0.82) |
| | Diluted | (13.27) | (0.16) | (14.45) | (0.18) | (16.45) | (0.22) | (65.60) | (0.82) |

Notes:

1 The above is an extract of the detailed format of Quarterly Financial Results filed with the Stock Exchanges under Regulation 33 of the SEBI (Listing Obligations and Disclosure Requirements) Regulations, 2015. The full format of the Quarterly Financial Results are available on the Company's website at www.ramco.com and BSE website www.bseindia.com and NSE website www.nseindia.com.

2 The above Consolidated Financial Results of Ramco Systems Limited, India (the "Company"), its subsidiaries, (together referred to as "Group") and its Associate were reviewed by the Audit Committee and approved by the Board of Directors in its meeting held on August 07, 2023. The Consolidated Financial Results are prepared in accordance with the Indian Accounting Standards (Ind-AS) as prescribed under Section 133 of the Companies Act, 2013 read with the relevant rules issued thereunder. The Statutory Auditors have carried a limited review of the Consolidated Financial Results of the Group for the quarter ended June 30, 2023 and have issued an unmodified report.

3 Key numbers of Standalone Financial Results of the Company for the Quarter ended June 30, 2023 are as below: **Rs. Mln.**

| Particulars | For the Quarter Ended | | | For the Year Ended |
|---|---|---|---|---|
| | June 30, 2023 Unaudited | March 31, 2023 Audited (Refer Note) | June 30, 2022 Unaudited | March 31, 2023 Audited |
| Total income from operations | 656.00 | 649.55 | 641.11 | 2,538.57 |
| Profit / (loss) before tax | (329.77) | (342.50) | (256.94) | (1,261.50) |
| Net profit / (loss) after tax | (312.36) | (244.80) | (256.52) | (1,130.05) |
| Total comprehensive income for the period (comprising profit / (loss) for the period (after tax) and other comprehensive income (after tax)) | (313.39) | (266.20) | (269.19) | (1,187.91) |

4 Figures for the previous period(s) have been regrouped / restated wherever necessary to make them comparable with the figures for the current period(s). Figures for the quarter ended March 31, 2023 are the balancing figures between audited figures in respect of the full financial year ended March 31, 2023 and published year to date figures up to the third quarter ended December 31, 2022.

By Order of the Board
**For Ramco Systems Limited**
**P.R Venketrama Raja**
Chairman

Place: Chennai
Date: August 07, 2023

# Karnataka Bank Ltd.

Your Family Bank. Across India.

**(Regd. & Head Office, Mahaveera Circle, Kankanady, Mangaluru - 575 002)**
**CIN : L85110KA1924PLC001128, e-mail : investor.grievance@ktkbank.com**
**(Website : www.karnatakabank.com Tel. No. : 0824-2228222)**

## 99th ANNUAL GENERAL MEETING (AGM) TO BE HELD THROUGH VC/OAVM

1. Shareholders to note that the 99th Annual General Meeting (AGM) of the Bank will be held through Video Conference (VC)/OAVM on **Tuesday, August 29, 2023 at 11.30 a.m. IST** in compliance with the General Circulars viz., 10/2022 and 11/2022 dated 28.12.2022 and other connected circulars mentioned therein (hereinafter referred to as "MCA Circulars") and all other applicable laws and circulars issued by the Ministry of Corporate Affairs (MCA) read with relavant SEBI Circulars.
2. In compliance with the above circulars, electronic copies of the Notice of the AGM and Annual Report for the Financial Year (FY) 2022-23 has been disseminated to all the shareholders whose email IDs are registered with the Bank's Registrar & Share Transfer Agent (RTA)/Depositories. The Notice of the 99th AGM and Annual Report for FY 2022-23 will also be made available on the Bank's website, at (https://karnatakabank.com/investor-portal), stock exchange websites (www.bseindia.com/www.nseindia.com) on the CDSL's website at https://www.evotingindia.com
3. Shareholders who have not registered their email addresses will also have an opportunity to cast their votes remotely. Those shareholders who have not cast their votes remotely during e-voting period, can exercise their e-voting rights during the AGM. The manner of voting remotely for shareholders holding shares in dematerialized and physical mode is provided in the Notice of AGM.
4. Shareholders may note that for the FY 2022-23 the Board of Directors has recommended a dividend of Rs. 5 per share and the record date for the purpose of dividend is fixed as **August 22, 2023.** The dividend, once approved by the shareholders, will be paid electronically through various online transfer modes to those shareholders who have updated their complete bank account details. For shareholders who have not updated their bank account details, dividend warrants will be sent to their registered addresses. To receive the dividend directly into the bank account and to avoid any delay in receiving the dividend, the shareholders are requested to update their KYC with their depositories (where shares are held in dematerialized mode) and with the RTA (where shares are held in physical mode).
5. The Register of Members and the Share Transfer books of the Bank shall remain closed from August 23, 2023 to August 29, 2023 (both days inclusive).
6. Members may note that as per the Income-Tax Act, 1961, ("the IT Act") as amended by the Finance Act, 2020, the Bank shall be required to deduct tax at source ("TDS") at the time of payment of dividend. In order to enable us to determine the appropriate TDS rate as applicable, members are requested to submit relevant documents, in accordance with the provisions of the IT Act and further details in this connection will be provided in the Notice of AGM.

For The Karnataka Bank Limited
**Sham K**
Company Secretary

Place : Mangaluru
Date : 07.08.2023

# CANTABIL RETAIL INDIA LIMITED

**Registered Office:** B- 16, Ground Floor, Lawrence Road Industrial Area, Delhi - 110035
**Corporate Identity Number (CIN):** L74899DL1989PLC034995
**Tel:** 91-11- 41414188, 91-11-46818101
**Website:** www.cantabilinternational.com
**E-mail:** investors@cantabilinternational.com

## NOTICE

Pursuant to Regulation 29, & 33 of the SEBI (Listing Obligation and Disclosure Requirement) Regulations, 2015, Notice is hereby given that the Meeting of the Board of Director's of the Company is scheduled to be held on **Saturday, August 12, 2023 at 12:00 Noon at B-16 Lawrence Road Industrial Area, New Delhi-110035** to, inter-alia, consider, approve:

1. Un-audited Financial Results of the Company for the quarter ended June 30, 2023
2. Recommendation of Final Dividend for the Financial Year 2022-23
3. Book Closure dates/Record Date for the purpose of ascertaining the eligibility of the shareholders for the payment of Dividend on the equity shares for the Financial Year 2022-23.
4. Proposal of Stock Split

**For CANTABIL RETAIL INDIA LIMITED**
**Sd/-**
**POONAM CHAHAL**
**Company Secretary and Compliance officer**

**Place: New Delhi**
**Date: 7th August, 2023**

# Apollo Hospitals Enterprise Limited

Corporate Identity Number : L85110TN1979PLC008035
Regd. Office : No. 19 Bishop Gardens, Raja Annamalaipuram, Chennai - 28, Tamil Nadu
Tel. +91-44-28290956
Email: investor.relations@apollohospitals.com, Website : www.apollohospitals.com

Apollo HOSPITALS

NOTICE is hereby given that the 42nd Annual General Meeting (AGM) of the members of Apollo Hospitals Enterprise Limited will be held at 10.15 a.m., (IST) on **Wednesday, 30th August 2023** through Video Conferencing (VC) / Other Audio Visual Means (OAVM). In compliance with the General Circular No. 10/2022 dated December 28, 2022, issued by the Ministry of Corporate Affairs (MCA) and Circular SEBI/HO/CFD/PoD-2/P/CIR/2023/4 dated January 5, 2023, issued by SEBI (hereinafter collectively referred to as "the Circulars"), companies are allowed to hold AGM through VC, without the physical presence of shareholders at a common venue. Accordingly, the 42nd AGM of the Company is being held through VC. The information and instructions for members attending the AGM through VC/OAVM are explained in the Notes to the Notice of the AGM. Members participating through VC/OAVM shall be reckoned for the purpose of quorum under Section 103 of the Companies Act, 2013.

In compliance with the relevant circulars, the Notice of the AGM and the Annual Report for the FY 2022-2023 have been sent electronically to all the members of the Company whose email addresses are registered with the Company/Depositary Participants. The aforesaid documents will also be available on the Company's website, www.apollohospitals.com and on the website of the stock exchanges where the shares of the Company are listed i.e., BSE Limited and National Stock Exchange of India Limited at www.bseindia.com and www.nseindia.com respectively. Members can attend and participate in the AGM through VC/OAVM facility only.

**Record Date and Payment of Dividend:-** The Board of Directors at their meeting held on May 30, 2023 have recommended the payment of final dividend of Rs.9/- per equity share (180%) of face value of Rs.5/- each for the financial year ended March 31, 2023. The record date for determining the names of Members eligible for dividend on equity shares, if declared at the AGM, is Saturday, 19th August 2023. The final dividend of Rs.9/- per share, after declaration at the AGM would be paid to those members whose names appear in the Register of Members / List of Beneficial Owners as at the close of business hours on the Record Date, 19th August 2023.

**E-Voting:-** Pursuant to Regulation 44 of LODR and Section 108 of the Companies Act 2013, read with Rule 20 of the Companies (Management and Administration) Rules 2014 as amended, the Company has engaged the services of National Securities Depository Limited (NSDL) to provide e-voting facility to the members. The details are as under :

1. The Company has fixed **Wednesday, 23rd August 2023** as the "Cut Off" date to ascertain the eligibility of members for e-voting.

2. The members, whose names appear in the Register of Members / List of Beneficial Owners as on the cut-off date i.e. 23rd August 2023 are entitled to avail the facility of remote e-voting in the AGM. Any person, who acquires shares and becomes a member of the Company after dispatch of the notice and holds shares as on the cut-off date may obtain the User ID and password by sending a request at evoting@nsdl.com by mentioning Folio No./DP ID and Client ID No. If the members are already registered with NSDL for remote e-voting, then the existing User ID and password can be used for casting the vote.

3. The remote e-voting process would commence on **27th August 2023 at 9.00 A.M. (IST) and end on 29th August 2023 at 5.00 P.M. (IST)** during which period the members may cast their vote electronically. Thereafter, the e-voting module shall be disabled by NSDL.

4. E-Voting during the AGM shall also be made available to those members who attend the AGM and have not already cast their vote through remote e-voting. In case of Members who cast their votes through remote e-voting, he/she shall not be allowed to vote again at the AGM. The detailed procedure for remote e-voting/e-voting is provided in the Notice of AGM.

**Scrutinizer :-** The Company has appointed Mrs. Lakshmmi Subramanian, Senior Partner, M/s. Lakshmmi Subramanian Associates, Practicing Company Secretaries as the Scrutinizer to scrutinize the process of remote e-voting and voting during the AGM in a fair and transparent manner.

**Results :-** The Results on the resolutions voted shall be declared within 2 working days from the conclusion of the AGM of the Company. The results declared along with the scrutinizer's report shall be posted on the Company's website : www.apollohospitals.com. and on the website of NSDL (https://www.evoting.nsdl.com) and would also be communicated to the Stock Exchanges.

**Manner of registering/updating email addresses :**

(a) Members holding shares in physical mode, who have not registered/updated their email addresses with the Company, are requested to send the scanned copy of the following documents by email to the RTA at srirams@integratedindia.in

(i) A signed request letter mentioning their name, folio no. and address.
(ii) Self-attested copy of the PAN Card and
(iii) Self-attested copy of any document (eg Aadhar Card, Driving License, Election Identity Card, Passport) in support of the address of the Member.

(b) Members holding shares in dematerialised mode, who have not registered/ updated their email addresses with the Depository Participant(s), are requested to register/update their email addresses with their Depository Participants.

After due verification, the RTA will forward the procedure for obtaining their login credentials to their registered email addresses.

**Manner of registering mandate for receiving Dividend:**

Members are requested to register/update their complete bank details :

(a) With their Depository Participant(s) with whom they maintain their demat accounts, if shares are held in dematerialised mode by submitting the requisite documents.

(b) With the RTA by emailing at srirams@integratedindia.in, if shares are in physical form by submitting the following documents:

(i) scan copy of the signed request letter which shall contain members name, folio number, bank details (bank account number), Bank and Branch Name and address, IFSC, MICR Details
(ii) Self attested copy of the PAN Card and
(iii) Cancelled cheque leaf.

Pursuant to the Finance Act, 2020 dividend income will be taxable in the hands of the shareholders w.e.f April 1, 2020 and the Company is required to deduct tax at source from dividend paid to shareholders at the prescribed rates. For the prescribed rates for various categories, the shareholders are requested to refer to the Finance Act, 2020 and amendments thereof. The shareholders are requested to update their PAN with the Company/RTA (in case of shares held in physical mode) and depositories ( in case of shares held in demat mode).

A Resident individual shareholder with PAN and who is not liable to pay income tax can submit a yearly declaration in Form No. 15G/15H, to avail the benefit of non-deduction of tax at source by using the link https://www.integratedindia.in/ExemptionFormSubmission.aspx on or before Monday, 28th August 2023 before 5.00 p.m IST . Shareholders are requested to note that in case their PAN is not registered, tax will be deducted at a higher rate of 20%.
Non-resident shareholders can avail beneficial rates under the tax treaty between India and their country of residence, subject to providing necessary documents i.e. No Permanent Establishment and Beneficial Ownership Declaration, Tax Residency Certificate, Form 10F, any other document which may be required to avail the tax treaty benefits by using the link https://www.integratedindia.in/ExemptionFormSubmission.aspx. The aforesaid declarations and documents need to be submitted by the shareholders on or before Monday, 28th August 2023 before 5.00 p.m. IST.
In the event the Company is unable to pay the dividend to any shareholder by electronic mode, due to non-registration of the bank account, the Company shall dispatch the dividend warrant to such shareholder.

**Contact Details :-** In case of any queries / grievances relating to e-voting, members may refer the instructions on e-voting contained in the Notice or refer the Frequently Asked Questions (FAQs) and User Manual on the e-voting website of NSDL or call on +91 22 48867000 and +91 22 24997000 to get further clarifications.

This public notice is also available on the Company's website:www. apollohospitals.com.

for APOLLO HOSPITALS ENTERPRISE LIMITED
**S.M. KRISHNAN**
Sr. VICE PRESIDENT – FINANCE AND COMPANY SECRETARY

Place : Chennai
Date : August 7, 2023

# SHYAMA INFOSYS LIMITED

**CIN: L24235MH1996PLC057150**
**Regd. Office:** 3rd Floor, Plot No.395/97, Ruia Building, Kalbadevi, Mumbai-400002. **Tel No.:** (033) 22420751
**Email:** shyamainfosys57@gmail.com
**Website:** www.shyamainfosyslimited.co.in

## NOTICE

Notice is hereby given pursuant to Regulation 29 read with Regulation 47 of the SEBI (Listing Obligation and Disclosure Requirements) Regulations, 2015 that the meeting of the Board of Directors of the Company will be held on Monday, 14th August, 2023 (Through Video Conferencing) to consider and take on record the Un-Audited Financial Results for the Quarter ended 30th June, 2023.

Further as per the 'code of conduct' formed under SEBI (PIT) Regulations, 2015 the trading window was already closed for Directors, Key Managerial Personnel, Connected Persons and Designated persons for trading in equity shares of the Company from 1st July, 2023 and would remain closed until ending 48 hours after the announcement of the Un-Audited Financial Results of the Company for the quarter ended 30th June, 2023.

**For Shyama Infosys Limited**
**SD/-**
**Samir Biswas**
**Managing Director**
**DIN: 07834496**

**Place: Mumbai**
**Date: 07-08-2023**

## PUBLIC NOTICE

This is to inform to the general public that **Bank of Baroda Mount Poisar Branch** intends to accept the under mentioned property standing in the name of **Mr. Anthony Dsouza & Mrs. Theresa Anthony Dsouza** as a security for the **Home loan to be granted to him**. Wherein it is informed by the party that the Original Registered Deed of Rectification dated 03.12.2009 executed between M/s. Davincy Constructions (Developers) and Mr. Allwyn D'costa & Mrs. Annie D'costa (Member) and Rosemar Apartment CHSL (Society), being document no. BDR-16/2044/2009 dated 03.12.2009 with Registration Receipt No. 2048 with respect to the said flat mentioned below has been lost and misplaced.

Any person or persons claiming any right of any nature whatsoever over the said unit by way of sale, mortgage, charge, lien, gift, trust, or otherwise in any manner whatsoever are hereby required to make the same known in writing to the undersigned with the documentary evidence in original in support thereof at the address mentioned below within 10 days from the publication of this notice hereof otherwise the claim, if any, will be considered as waived, and it will be presumed that the property is free of any charge/claim/encumbrance.

**Schedule**

Flat No. 304, being on the 3rd floor, admeasuring 590 sq. ft. (built-up area), in Wing "A", building known as "Rose-mar Apartments CHSL", situated at Holy Cross Road, IC Colony, Borivali (West), Mumbai - 400103, on land bearing CTS No. 1024, 1024/1 to 11, at Village - Eksar, Taluka - Borivali, District - Mumbai Suburban.

**Branch Detail / Contact No.:**
Bank of Baroda, Mount Poisar Branch
Borivali, Mumbai. Ph.No.9820448472
poinsu@bankofbaroda.com

**Advocate Renuka M Nair,**
Shop No.05, Bldg.No.16,
Sonam Classic, Phase XI,
New Golden Nest, Bhayander (E), Thane

# MAX HEALTHCARE INSTITUTE LIMITED

MAX Healthcare

**CIN : L72200MH2001PLC322854**
**Registered Office: 401, 4th Floor, Man Excellenza, S. V. Road, Vile Parle (West), Mumbai 400056, Maharashtra, Tel:-+91- 22 2610 0461/62**
**Corporate Office: 2nd Floor, Capital Cyberscape, Sector-59 Gurugram, Haryana 122011, Tel: +91 124 6207777**
**E-mail:-secretarial@maxhealthcare.com,investors@maxhealthcare.com**
**Website:- www.maxhealthcare.in**

**EXTRACT OF FINANCIAL RESULTS FOR THE QUARTER ENDED JUNE 30, 2023**

(₹ in Lakhs)

| S. No. | Particulars | CONSOLIDATED | | | |
|---|---|---|---|---|---|
| | | Quarter ended | | | Year ended |
| | | June 30, 2023 | March 31, 2023 | June 30, 2022 | March 31, 2023 |
| | | Unaudited | Unaudited | Unaudited | Audited |
| 1 | Revenue from operations | 1,28,499 | 1,21,451 | 1,06,690 | 4,56,260 |
| 2 | Profit before tax for the period/year | 30,349 | 30,068 | 21,638 | 1,06,372 |
| 3 | Profit after tax for the period/year | 24,008 | 25,092 | 17,283 | 1,10,351 |
| 4 | Total comprehensive income for the period/year, net of tax | 23,951 | 25,003 | 17,249 | 1,10,303 |
| 5 | Paid-up equity share capital (Face value of ₹ 10 per share) | **97,142** | **97,092** | **96,963** | **97,092** |
| 6 | Other equity | | | | 6,43,867 |
| 7 | Earning per share (of ₹ 10 each) | Not annualised | Not annualised | Not annualised | Annualised |
| | Basic- In Rupees | 2.47 | 2.58 | 1.78 | 11.38 |
| | Diluted-In Rupees | 2.46 | 2.58 | 1.78 | 11.36 |

I. **The key Standalone Financial information of the Company is as under:-**

(₹ in Lakhs)

| S. No. | Particulars | STANDALONE | | | |
|---|---|---|---|---|---|
| | | Quarter ended | | | Year ended |
| | | June 30, 2023 | March 31, 2023 | June 30, 2022 | March 31, 2023 |
| | | Unaudited | Unaudited | Unaudited | Audited |
| a | Revenue from operations | 54,363 | 50,732 | 43,979 | 1,90,466 |
| b | Profit before tax for the period/year | 16,098 | 15,096 | 11,112 | 56,314 |
| c | Profit after tax for the period/year | 12,606 | 12,637 | 8,716 | 69,431 |
| d | Total comprehensive income for the period/year, net of tax | 12,601 | 12,673 | 8,705 | 69,501 |

II. The above is an extract of the detailed format of financial results for quarter ended June 30, 2023, filed with the Stock Exchanges under Regulation 33 of the SEBI (Listing Obligations and Disclosure Requirements) Regulations, 2015. The full format of financial results (Consolidated & Standalone) for the quarter ended June 30, 2023 are available on the Company's website i.e. **www.maxhealthcare.in** and also on the Stock Exchanges websites (**www.bseindia.com** and **www.nseindia.com**).

III. The above financial results (Standalone & Consolidated) for the quarter ended June 30, 2023, have been reviewed by the Audit & Risk Management Committee and approved by the Board of Directors on August 7, 2023. The financial results for the quarter ended June 30, 2023 have also been reviewed by Deloitte Haskins & Sells, the statutory auditors of the Company. The report of the statutory auditor is unmodified.

IV. During the financial year ended March 31, 2023, the liquidator, appointed pursuant to scheme of voluntary liquidation approved by the shareholders of Saket City Hospitals Limited ("SCHL"), a wholly owned subsidiary of the Company, had distributed the entire business undertaking of SCHL to the Company, on a going concern basis. This was accounted for using the pooling of interests method in accordance with Appendix C of Ind AS 103 'Business combinations of entities under common control' and accordingly the comparative financial information of the Standalone Financial Statements for previous periods have been restated to give effect to such business combination from beginning of period disclosed.

**Max Healthcare Institute Limited**
**Sd/-**
**Abhay Soi**
**Chairman & Managing Director**
**DIN: 00203597**

**Place : New Delhi**
**Date : August 7, 2023**